ಸೃಜನಿ
SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp.41-45
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

ಶಿವಶರಣರ ಬದುಕು ಸಾರ್ವಕಾಲಿಕ ಆದರ್ಶ

ಡಾ. ರಾಜಶೇಖರ ಎಸ್. ದಾನರಡ್ಡಿ
ಸಹಾಯಕ ಕನ್ನಡ ಪ್ರಾಧ್ಯಾಪಕ, ಪಂಡಿತ ಪಂಚಾಕ್ಷರಿ ಗವಾಯಿಗಳವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗದಗ

Abstract:
ಶರಣರು ಈ ಭೂಮಿಗೆ ಬಂದ ವಿಚಾರವಂತರು ದೈವಿಸಂಭೂತರು ಸಮಾಜದ ಕಲ್ಯಾಣದೆಡೆಗೆ ಸದಾ ಚಿಂತನೆ ನಡೆಸಿದವರು. ಅವರ ವಿಚಾರಗಳು ಅವರ ವಚನಗಳಲ್ಲಿ ವ್ಯಕ್ತವಾಗಿವೆ. ಶರಣರು ಬದುಕಿದಂತೆ ಬರೆದರು ಮತ್ತು ಬರೆದಂತೆ ಬದುಕಿದರು. ಬಹು ಸಂಖ್ಯೆಯಲ್ಲಿ ಇಂಥ ಶರಣರನ್ನು ಪಡೆದ ಕರ್ನಾಟಕವು ಒಂದು ಪುಣ್ಯಭೂಮಿ. ಅವರು ನಡೆದ ಈ ನೆಲ, ಕುಡಿದ ಜಲಗಳೆಲ್ಲವೂ ಪಾವನ. ಸಮಾಜ ಕಲ್ಯಾಣವನ್ನು ಗುರಿಯಾಗಿಟ್ಟುಕೊಂಡು ನಡೆಸಿದ ಚಿಂತನೆಯೇ ಇದಕ್ಕೆ ಕಾರಣ. ಶಿವಶರಣರ ಪ್ರತಿಯೊಂದು ವಚನವೂ ಅವರ ಬದುಕಿನ ನಡೆಯನ್ನೇ ಹೇಳುತ್ತೇವೆ. ಅವರ ಬದುಕು ಮೌಲ್ಯಯುತವಾಗಿತ್ತು. ಅವರ ಒಂದೊಂದು ಮಾತುಗಳ ಸಹ ಕಾವ್ಯದಂತೆಯೇ ಗೋಚರಿಸಿದವು. ಅದಕ್ಕಾಗಿಯೇ ಅವರ ಮಾತುಗಳು ಇಂದಿಗೂ ನಮಗೆ ವಚನಗಳಾಗಿ ಉಳಿದುಕೊಂಡಿವೆ.

Keywords: *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಶಿವಶರಣರು, ಆದರ್ಶ ಜೀವನ.*

ಪೀಠಿಕೆ

ಸಮಾಜದ ಕಲ್ಯಾಣದೆಡೆಗೆ ಸದಾ ಚಿಂತನೆ ನಡೆಸಿದ ಶಿವಶರಣರು ಬರೆಯಬೇಕೆಂದು ಬರೆದವರಲ್ಲ, ಅವರು ಬರೆದು ಪ್ರಸಿದ್ಧಿಗಳಿಸುವ ಯಾವ ಹಮ್ಮು-ಬಿಮ್ಮುಗಳೂ ಇರಲಿಲ್ಲ. ಅವರು ಬರೆದುದು ತಮಗಾಗಿ ಅಲ್ಲ ಜನತೆಗಾಗಿ ಜನರ ಜೀವನ ಹಸನಾಗಬೇಕು, ಅವರ ಬದುಕಿನಲ್ಲಿರುವ ಅಂಧಃ ಶ್ರದ್ಧೆ, ಮೂಢನಂಬಿಕೆ, ಕಂದಾಚಾರಗಳು, ಹೀಗೆ ಇನ್ನೂ ಮುಂತಾದ ಸಮಾಜಕ್ಕಂಟಿರುವ ಶಾಪವನ್ನು ಕಳೆದು ಅಂದಿನ ಸಮಾಜಕ್ಕೆ ಅರಿವು ಕೊಡುವುದೇ ಶರಣರ ಉದ್ದೇಶವಾಗಿತ್ತು. ಹೀಗಾಗಿ ಕಾಯಕ ಮಾಡುತ್ತಾ ದಾಸೋಹ ಕಾರ್ಯವನ್ನು ನಡೆಸುತ್ತಾ ತಮ್ಮ ಬಿಡುವಿನ ವೇಳೆಯಲ್ಲಿ ವಚನ ರಚನೆಗಳ ಮೂಲಕ ಸಮಾಜವನ್ನು ತಿದ್ದಲು ಪ್ರಯತ್ನಪಟ್ಟರು. ಹೀಗಾಗಿ ಅವರ ವಚನಗಳೆಲ್ಲವೂ ನಮಗೆ ಸಾರ್ವಕಾಲಿಕ ಆದರ್ಶವಾಗಿ ಇವತ್ತಿಗೂ ಜೀವಂತವಾಗಿವೆ.

ಶರಣ ಎನ್ನುವದನ್ನು ನಾವು ಭಕ್ತ ಎನ್ನುವ ಅರ್ಥದಲ್ಲಿ ಪರಿಭಾವಿಸುವುದೇ ಹೆಚ್ಚು ಹನ್ನೆರಡನೇ ಶತಮಾನದಲ್ಲಿ ಬಸವಾದಿ ಪ್ರಮಥರು ದೇವರನ್ನು ಅರಿತವರಾಗಿ, 'ನಾನು ದೇವರನ್ನು ಅರಿತಿದ್ದೇನೆ' ಎಂದು ಹೇಳದೆ ದೇವರ ಒಂದು ಭಾಗವೇ ಆಗಿ ದೇವರಲ್ಲಿ ನಾವು ಆವಾಹಿಸಿಕೊಂಡಂಥ ದಯೆ ಮತ್ತು ಕಾರುಣ್ಯಭಾವದ ಪ್ರತಿರೂಪವಾಗಿದ್ದರು. ಅಣ್ಣ ಬಸವಣ್ಣ ಸಹಜ ಜೀವನದಲ್ಲೇ ಶರಣತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡವನು. ಆದ್ದರಿಂದಲೇ ಆತ.

Please cite this article as: ರಾಜಶೇಖರ ಎಸ್. ದಾನರಡ್ಡಿ. (2024). ಶಿವಶರಣರ ಬದುಕು ಸಾರ್ವಕಾಲಿಕ ಆದರ್ಶ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(6), 41–45.

ಅಂದು ಇಂದು ಮತ್ತೊಂದೆನಬೇಡ
ದಿನವಿಂದೇ ಶಿವಶರಣೆಂಬವಂಗೆ
ದಿನವಿಂದೇ ಹರ ಶರಣೆಂಬವರಿಗೆ
ದಿನವಿಂದೇ ನಮ್ಮ ಕೂಡಲ ಸಂಗನ ಮಾಣದೆ ನೆನವಂಗೆ

ಎನ್ನುತ್ತಾನೆ. ಅಂದರೆ ನಾನು ನಿನ್ನೆ ಶರಣನಾಗಿದ್ದೆ, ಇಂದು ಶರಣನಾಗುವೆ ಎನಬೇಡ. ಇಂದು ಈ ಕ್ಷಣವೆ ಶರಣನಾಗಲು ಪ್ರಶಸ್ತ ಮತ್ತು ಪ್ರತ್ಯಕ್ಷ ಕ್ಷಣ ಕೂಡಾ ಎನ್ನುವದು. ಕೂಡಲಸಂಗನನ್ನು ತಪ್ಪದೆ ನೆನಸಿಕೊಳ್ಳುತ್ತಾ ಶರಣನಾಗು ಎನ್ನುವ ಕರೆಯಷ್ಟೇ ಅಲ್ಲ. ಆ ಕರೆಯಲ್ಲಿ ತಾನೂ ಒಳಗೊಂಡಿದ್ದೆನೆ ಎನ್ನುವ ಭಾವ. ಆದರೆ ಅಲ್ಲಮ,

ಹರಿವ ನದಿಗೆ ಮೈಯೆಲ್ಲಕಾಲು
ಉರಿವ ಕಿಚ್ಚಿಗೆ ಮೈಯೆಲ್ಲ ನಾಲಿಗೆ
ಬೀಸುವ ಗಾಳಿಗೆ ಮೈಯೆಲ್ಲಾ ಮುಖ(ಕೈ)
ಗುಹೇಶ್ವರಾ ನಿಮ್ಮ ಶರಣರಿಗೆ
ಸರ್ವಾಂಗವೆಲ್ಲ ಲಿಂಗ!

ಎಂದು ತನ್ನನ್ನು ಬಿಟ್ಟು ಶಿವ ಎನ್ನುವದು ಬೇರೆ ಇರಲು ಸಾಧ್ಯವಿಲ್ಲ ಎಂದು ಶಿವತತ್ತ್ವವೇ ಶರಣತತ್ತ್ವ ಎಂದು ವ್ಯಾಖ್ಯಾನಿಸುತ್ತಾನೆ. ಆದರೆ ಈ ಶಿವತತ್ತ್ವವನ್ನು ಸಾಮಾನ್ಯರು ಸಾಕ್ಷಾತ್ಕರಿಸಿಕೊಳ್ಳುವದು ಕಷ್ಟ ಸಾಧ್ಯ ಎಂದು ಕೊಂಡೇ ಬಸವಣ್ಣ.

ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನಶಿರವ ಸೋರೆಯ ಮಾಡಯ್ಯ
ಎನ್ನ ನರನ ತಂತಿಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ
ಬತ್ತೀಸರಾಗವ ಪಾಡಯ್ಯ ಉರದಲೊತ್ತಿ ಬಾರಿಸು
ಕೂಡಲ ಸಂಗಮದೇವಾ.

ಎನ್ನುತ್ತಾನೆ. ಇದು ಶರಣ ತತ್ವದೊಂದಿಗೆ ಐಕ್ಯವಾಗದವರ ಭಕ್ತಿಮಾರ್ಗ. ಆದರೂ ಇಲ್ಲಿನ ತಾತ್ವಿಕತೆಯೂ ಇನ್ನೂ ಅಕ್ಷರ ಜ್ಞಾನವಿಲ್ಲದ ಸಾವಿರಾರು ಜನರಿಗೆ ತಲುಪಬೇಕು ಎನ್ನುವಂತೆ ದೇವಾಲಯ ಸಂಸ್ಕೃತಿಯನ್ನು ನಿಧಾನವಾಗಿ ಧಿಕ್ಕರಿಸಲು ಕರೆಕೊಡುತ್ತಾನೆ.

ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡಲಿ ಬಡವನಯ್ಯಾ?
ಎನ್ನ ಕಾಲೇಕಂಬ, ದೇಹವೇ ದೇಗುಲ
ಶಿರವೇ ಹೊನ್ನ ಕಲಶವಯ್ಯ
ಕೂಡಲ ಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

ತೋರಿಕೆಗೆ ಇದು ಶಿವತತ್ತ್ವನ್ನು ಪ್ರತಿಪಾದಿಸುವ ಚಿಂತನೆಯಾದರೂ ಇದರೊಳಗೆ ಅಪರೂಪದ ಒಂದು ಸೂಕ್ಷ್ಮ ಸಂವೇದನೆ ಇದೆ. ವರ್ಗ–ವರ್ಣ ವ್ಯವಸ್ಥೆಗೆ, ತನ್ಮೂಲಕ ಸ್ಪರ್ಶ ಅಸ್ಪೃಶ್ಯತೆಯ ಮೂಲದಿಂದ ಉಂಟಾಗಿದ್ದ ಅಸಮಾನತೆಗೆ ದೇವಾಲಯವೇ ಕಾರಣವಾಗಿರುವದರಿಂದ ದೇವರು ಎನ್ನುವವನು ದೇವಾಲಯದಲ್ಲಿ ಇಲ್ಲ ಆತ ನಮ್ಮಲ್ಲೇ ಇದ್ದಾನೆ ಎಂದು ಜನ ಭಾವಿಸಿಕೊಂಡರೆ ಅದು ಶಿವತತ್ತ್ವವಷ್ಟೇ ಅಲ್ಲ. ಸಾಮಾಜಿಕ ನ್ಯಾಯವೂ ಹೌದು ಎನ್ನುವ ದೂರದೃಷ್ಟಿ (ಸಮೀಪ ದೃಷ್ಟಿಯೂ ಹೌದು) ಬಸವಣ್ಣನದ್ದು. ಶರಣಭಾವ ಎನ್ನುವದು ಬಸವಣ್ಣನ ಕಾಲದ ತನಕ ಸಾಮಾಜಿಕವಾಗಿ ಹೊರಗಿತ್ತು. ಅಂದರೆ ಭಕ್ತಿ ಭಾವದಲ್ಲೂ ಒಳಹೊರಗೆ ಎಂಬುದು ವೇದಾದಿ ಆಗಮಗಳಲ್ಲಿ ಇರದೇ ಇದ್ದರೂ ಅದನ್ನು ಅರ್ಥಮಾಡಿಕೊಳ್ಳಲಾಗದ ಮೇಲ್ವರ್ಗದವರು, ವೇದಾದಿ ಆಗಮಗಳನ್ನೇ ತಪ್ಪಾಗಿ ಅರ್ಥೈಸಿ ಅದನ್ನು ಮುಂದೆ ದೇವಾಲಯ ಸಂಸ್ಕೃತಿಯ ಭಾಗವಾಗಿಸಿದರು. ಅದನ್ನು ಒಡೆಯುವದು ಅಂದರೆ ವೇದಾದಿಗಳನ್ನು ತಿರಸ್ಕರಿಸುವುದು ಎಂದು ಹೇಳುವದೇ ಬಸವಣ್ಣನಿಗೆ ಮುಖ್ಯವಾಗಿತ್ತು. ಆದರೆ ಅವುಗಳಲ್ಲಿ ತಾತ್ವಿಕ ಅಂಶಗಳನ್ನು ದೇಶಿ ಭಾಷೆಯಲ್ಲಿ ವಚನ ರೂಪಕ್ಕೆ ತರುವದು ಮತ್ತು ದೇವಾಲಯ ಸಂಸ್ಕೃತಿಯ ಜೊಳ್ಳನ್ನು ವಚನಗಳ ರೂಪದ ಅರಿವಿನಿಂದ ನಿವಾರಿಸುವುದು ನಿಜವಾದ 'ಧರ್ಮವೇ' ಎಂದು ಬಸವಣ್ಣ ನಂಬಿದ್ದ.

ಶರಣರು ನುಡಿದಂತೆ ನಡೆದರು. ಅರಿವು ಆಚಾರಗಳನ್ನು ಸಮನ್ವಯಗೊಳಿಸಿ ಅನುಭಾವವನ್ನು ಹೊಂದಿದರು. ಪರಮ ಸುಖಿಗಳಾದರು. ಅರಿವು ಆಚಾರವಿಲ್ಲದೆ ಅನುಭಾವವಿಲ್ಲ. ಅನುಭಾವವಿಲ್ಲದೆ ಆನಂದವಿಲ್ಲ. ಪಕ್ಷಿಯ ಎರಡು ರೆಕ್ಕೆಗಳಂತೆ ಜ್ಞಾನ ಕ್ರೀಯೆ ಎರಡೂ ಮುಖ್ಯ. ಅಕ್ಕಿಯಿಲ್ಲದ ತುಷಕ್ಕೆ ಅಗ್ಘವಣಿಯನರೆದಡೆ ಅದೆಂದಿಗೆ ಬೆಳೆದು ಫಲವಪ್ಪುದಯ್ಯ? ಎಂದು ಮಹಾದೇವಿಯಕ್ಕ ಕೇಳುತ್ತಾರೆ. ಅಂದರೆ ಅಕ್ಕಿಯಿಲ್ಲದ ಬರಿ ತೌಡು ಬಿತ್ತಿ ನೀರನ್ನು ಎರೆದರೆ ಫಲವಿಲ್ಲ ಎಂಬುದು ಅರಿವು. ಇನ್ನೂ ತೌಡು ತಗೆದು ಬರಿ ಅಕ್ಕಿಯನ್ನು ಬಿತ್ತಿದರೂ ಫಲವಿಲ್ಲ. ಇದು ಆಚಾರ, ಅದಕ್ಕೆ ತೌಡಿನ ಸಹಿತ ಅಕ್ಕಿ ಇದ್ದ ಬತ್ತವನ್ನು ಬಿತ್ತಿದರೆ ಫಲವಿದೆ. ಅದಕ್ಕೆ ಅರಿವಿಲ್ಲದ ಆಚಾರ ಕುಂಟು. ಆಚಾರವಿಲ್ಲದ ಅರಿವು ಕುರುಡು ಎಂದಿರುವರು ಶರಣರು. ನಡೆ ನುಡಿಗೆ ಸಂಬಂಧಿಸಿದಂತೆ ಮಾದಾರ ಚೆನ್ನಯ್ಯನ ವಚನವೊಂದು ಹೀಗಿದೆ–

ನಡೆ ನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಸೂತಕವಿಲ್ಲ

ನುಡಿ ಲೇಸು ನಡೆಯ ಧರ್ಮವಾದಲ್ಲಿ

ಅದು ಬಿಡುಗಡೆಯಿಲ್ಲದ ಹೊಲೆ

ಕಳವು ಪಾರದ್ವಾರಂಗಳಲ್ಲಿ ಹೊಲಬನರಿಯದೆ

ಕೆಟ್ಟು ನಡೆವುತ್ತ ಮತ್ತೆ ಕುಲಜರೆಂಬ ಒಡಲವರುಂಟೆ?

ಆಚಾರವೇ ಕುಲ, ಅನಾಚಾರವೆ ಹೊಲೆ,

ಇಂತೀ ಉಭಯವ ತಿಳಿದರಿಯಬೇಕು.

ಕೈಯುಳಿಕತ್ತಿ ಅಡಿಗೊಂಟಕೆ? ಅಡಿಯಾಗಬೇಡ

ಅರಿನಿಜಾತ್ಮಾರಾಮನಾ

ನಮ್ಮ ನಡೆ ಮತ್ತು ನುಡಿಯಲ್ಲಿ ವ್ಯತ್ಯಾಸವಾದರೆ ಆತ್ಮ ವಂಚಕರಾಗುವೆವು. ನಮ್ಮ ನಡೆ ನುಡಿಗಳೇ ನಮ್ಮ ಸಿದ್ಧಾಂತವಾಗಬೇಕು. ಅಂದರೆ ನಮ್ಮ ನಡೆ ನುಡಿಯಲ್ಲಿ ಯಾವುದೇ ವ್ಯತ್ಯಾಸವಾಗಬಾರದು. ಹೀಗೆ ಬದುಕುವವರೇ ಕುಲಜರು. ಅಂದರೆ ಅವರು ಯಾವುದೇ ಕುಲದವರಿದ್ದರೂ ಕುಲಸೂತಕವಿರುವದಿಲ್ಲ. ಹೊಲೆಸೂತಕ ವಿರುವದಿಲ್ಲ. ಒಳ್ಳೆಯ ಮಾತನಾಡುತ್ತಾ ಕೆಟ್ಟ ನಡವಳಿಕೆ ಇದ್ದರೆ ಅದು ಮುಕ್ತಿ ಕಾಣದ ಹೊಲೆಬದುಕು. ಕಳ್ಳತನ, ವ್ಯಭಿಚಾರ ಮುಂತಾಗಿ ದಾರಿತಪ್ಪಿ ಹಾಳಾಗಿ ಹೋಗುವವರು ಕುಲೋತ್ತಮರು ಎಂದು ಹೇಳಲು ಸಾಧ್ಯವೇ ಎಂದು ಚೆನ್ನಯ್ಯನವರು ಪ್ರಶ್ನಿಸುತ್ತಾರೆ. ಸದಾಚಾರವೇ ಕುಲ, ಅನಾಚಾರವೆ ಹೊಲೆ, ಎಂದು ವ್ಯಾಖ್ಯಾನಿಸುತ್ತಾರೆ. ಈ ಸರಿ ತಪ್ಪುಗಳ ಬಗ್ಗೆ ಪರಿಜ್ಞಾನವಿರಬೇಕು. ಅಂದಾಗ ಮಾತ್ರ ನನ್ನೊಳಗಿನ ಘನವನ್ನು ತಿಳಿದುಕೊಂಡು ಘನಮನದವರಾಗಲು ಸಾಧ್ಯ ಎಂದು ಈ ವಚನದಲ್ಲಿ ತಿಳಿಸಿರುವರು.

ಜೇಡರ ದಾಸಿಮಯ್ಯ ಶಿವನಿಗೆ ಸವಾಲು ಹಾಕುವ ವಚನವೊಂದು ಹೀಗಿದೆ–

ಒಡಲುಗೊಂಡವ ಹಸಿವ; ಒಡಲುಗೊಂಡವ ಹುಸಿವ

ಒಡಲುಗೊಂಡವನೆಂದು

ನೀನೆನ್ನ ಜಡಿದೊಮ್ಮೆ ನುಡಿಯದಿರ

ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡ ರಾಮನಾಥ.

ದೇವರು ನಿರಾಕಾರನಾಗಿದ್ದಾನೆ. ಹಸಿವು ತೃಷೆಗಳು ಆತನಬಳಿ ಸುಳಿಯಲಾರವು. ಆದರೆ ಜನ ಲೌಕಿಕ ಜಗತ್ತಿನಲ್ಲಿದ್ದಾರೆ ಅವರಿಗೆ ಹಸಿವು ನೀರಡಿಕೆಗಳಾಗುತ್ತವೆ. ಬಡವರಿಗಂತೂ ಹೊಟ್ಟೆ ತುಂಬಿಸಿಕೊಳ್ಳುವದೇ ದೈನಂದಿನ ಸಮಸ್ಯೆಯಾಗಿರುತ್ತದೆ. ಹೊಟ್ಟೆಪಾಡಿಗಾಗಿ ಕೆಲವರು ಸುಳ್ಳು ಹೇಳುವುದು ಸಹಜವಾಗಿದೆ. ದಾಸಿಮಯ್ಯನವರು ಅಂಥ ನಿರ್ಗತಿಕರ ಪರವಾಗಿ ನಿಂತು ದೇವರ ಜೊತೆ ವಾಗ್ವಾದಕ್ಕೆ ಇಳಿಯುತ್ತಾರೆ. ಆ ಕಡು ಬಡವರ ಧ್ವನಿಯಾಗಿ ದೇವರನ್ನು ಪ್ರಶ್ನಿಸುತ್ತಾರೆ. ನಾನು ಹಸಿಯುವ ದೇಹವುಳ್ಳವನೆಂದು ಗದರಿಸಿ ಮಾತನಾಡಬೇಡ ಎಂದು ದೇವರಿಗೆ ಎಚ್ಚರಿಕೆ ನೀಡುತ್ತಾರೆ. ನೀನು ನನ್ನ ಹಾಗೆ ಒಂದು ಸಲವಾದರೂ ದೇಹವನ್ನು ಧರಿಸಿ ನೋಡು. ಆಗ ನಿನಗೆ ಹಸಿವಿನ ಸಮಸ್ಯೆಯ ಅರಿವಾಗುತ್ತದೆ. ನೀನು

ಕೂಡ ಸುಳ್ಳು ಹೇಳುವ ಪ್ರಸಂಗ ಬರುತ್ತದೆ. ಆಗ ದೇಹ ಹೊಂದಿದವರ ಸಮಸ್ಯೆಗಳ ಅರಿವಾಗುತ್ತದೆ ಎಂದು ದಾಸಿಮಯ್ಯನವರು ದೇವರಿಗೆ ಸವಾಲು ಹಾಕುತ್ತಾರೆ. ಹೀಗೆ ಅವರು ಬಡವರ ಪಕ್ಷ ವಹಿಸುತ್ತಾರೆ. ಬಡವರ ಅಸಹಾಯಕ ಬದುಕಿನ ಬಗ್ಗೆ ಅವರು ಸ್ಪಂದಿಸಿದ ಕ್ರಮ ಹೃದಯಸ್ಪರ್ಶಿಯಾಗಿದೆ.

ಕಾಶ್ಮೀರದಲ್ಲಿನ ಸವಾಲಾಕ್ಷದ ದೊರೆ ಮಹದೇವ ಭೂಪಾಲ, ಬಸವಣ್ಣನವರ ನವ ಸಮಾಜದ ಪರಿಕಲ್ಪನೆಗೆ ಮನಸೋತು, ಪತ್ನಿ ಗಂಗಾದೇವಿ (ಮಹಾದೇವಿ) ಜೊತೆ ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುವ ಕಾಯಕಕ್ಕೈಗೊಂಡ ಕಾರಣ ಮೋಳಿಗೆ ಮಾರಯ್ಯನೆಂದೆ ಪ್ರಸಿದ್ಧರಾದರು. ಅವರು ಕಾಯಕದಲ್ಲಿ ಅರಸೊತ್ತಿಗೆಗಿಂತ ಹೆಚ್ಚಿನ ಶಾಂತಿ ಸಮಾಧಾನಗಳನ್ನು ಹೊಂದಿದ್ದರು. ಅವರ ವಚನವೊಂದು ಮೋಳಿಗೆ ಮಾರಯ್ಯನವರ ಜೀವನ ದರ್ಶನಕ್ಕೆ ಸಾಕ್ಷಿಯಾಗಿದೆ.

ಆನೆಕುದುರೆ ಭಂಡಾರವಿರ್ದಡೇನು?

ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಧಮಂಚ

ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ

ಒಡಲು ಭೂಮಿಸಂಗ, ಒಡವೆ ತಾನೇನಪ್ಪುದೊ?

ಕೈವಿಡಿದ ಮಡದಿ ಪರರ ಸಂಗ, ಪ್ರಾಣ ವಾಯುವಿನಸಂಗ

ಸಾವಿಂಗೆ ಸಂಗಡವಾರೂ ಇಲ್ಲ ಕಾಣಾ, ನಿಃಕಳಂಕ ಮಲ್ಲಿಕಾರ್ಜುನಾ

ಮನುಷ್ಯನ ಹತ್ತಿರ ಆನೆಗಳಿರಬಹುದು. ಕುದುರೆಗಳಿರಬಹುದು ಹಾಗೂ ಭಂಡಾರದ ತುಂಬೆಲ್ಲ ಧನ-ಕನಕ ತುಂಬಿರಬಹುದು ಆದರೆ ಇವು ಯಾವವೂ ಆತನ ಹಸಿವನ್ನು ನಿಗಿಸುವದಿಲ್ಲ. ಇಷ್ಟೆಲ್ಲ ಇದ್ದವನಿಗೆ ಊಟಕ್ಕೆ ಬಹಳವಾದರೆ ಅರ್ಧ ಸೇರು ಅಕ್ಕಿಬೇಕು ಮತ್ತು ಒಂದು ಹಸುವಿನ ಹಾಲು ಸಾಕು- ಮಲಗುವದಕ್ಕೆ ಅರ್ಧ ಮಂಚ ಸಾಕು. ಉಳಿದ ಸಂಪತ್ತೆಲ್ಲವೂ ಹೆಸರಿಗೆ ಮಾತ್ರ ಆದ್ದರಿಂದ ಅರ್ಥಹೀನ ಶ್ರೀಮಂತಿಕೆಯನ್ನು ನಂಬಿ ಹಾಳಾಗಬೇಡ ಎಂದು ಮೋಳಿಗೆ ಮಾರಯ್ಯನವರು ಮಾನವ ಜನಾಂಗಕ್ಕೆ ಸಾರಿದ್ದಾರೆ. ಈ ದೇಹ ಒಂದು ದಿನ ಮಣ್ಣು ಪಾಲಾಗುವದು, ಸಂಪತ್ತು ಯಾರದೋ ಪಾಲಾಗುವದು, ಹೆಂಡತಿ ಇನ್ನೊಬ್ಬರ ಪಾಲಾಗುವಳು ನಮ್ಮ ದೇಹದಲ್ಲಿರುವ ಪ್ರಾಣವಾಯು ಗಾಳಿಯ ಪಾಲಾಗುವದು. ಹೀಗೆಲ್ಲ ಇರುವಾಗ ಸತ್ತವನ ಜೊತೆ ಹೋಗುವವರು ಯಾರು ? ಸಾವಿಗೆ ಯಾರೂ ಜೊತೆಗಾರರಿರುವದಿಲ್ಲ ಎನ್ನುವ ಬದುಕಿನ ಕಟು ವಾಸ್ತವವನ್ನು ಈ ವಚನದಲ್ಲಿ ಮೋಳಿಗೆ ಮಾರಯ್ಯನವರು ತೆರೆದಿಡುರುತ್ತಾರೆ.

ಬಸವಣ್ಣನವರ ಪ್ರಸಿದ್ಧವಾದ ವಚನವೊಂದನ್ನು ಈ ಸಂದರ್ಭದಲ್ಲಿ ನೋಡಬಹುದಾಗಿದೆ.

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ!

ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ!

ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ!

ಇದೇ ಅಂತರಂಗ ಶುದ್ಧಿ! ಇದೇ ಬಹಿರಂಗ ಶುದ್ಧಿ!

ಇದೇ ನಮ್ಮ ಕೂಡಲ ಸಂಗಮ ದೇವನೊಲಿಸುವ ಪರಿ!'

ಈ ವಚನದಲ್ಲಿ ಬಸವಣ್ಣನವರು ಏನೇನು ಮಾಡಬಾರದು ಎಂಬುದನ್ನು ಹೇಳುತ್ತಾರೆಯೇ ಹೊರತು ಏನು ಮಾಡಬೇಕು ಎಂಬುದನ್ನು ಹೇಳುವದಿಲ್ಲ. ಅಂತರಂಗ ಬಹಿರಂಗ ಈ ಎರಡೂ ಶುದ್ಧವಾಗಿರಬೇಕೆಂಬುದೇ ವೇದ ಆಗಮ, ಶಾಸ್ತ್ರ, ಪುರಾಣ ಮುಂತಾದ ಎಲ್ಲ ಧರ್ಮವಾಣಿಯ ಮರ್ಮ ಧ್ವನಿ. ಆದರೆ ಇದನ್ನು ನಿತ್ಯ ವ್ಯವಹಾರಕ್ಕೆ ಇಳಿಸುವ ವಿವರ ವಿವೇಚನಾ ಶಕ್ತಿಯಿಲ್ಲದ ಜನ ಅನೂಚಾನವಾಗಿ ಬಂದ ಕೇವಲ ಆಡಂಬರದ ಅರ್ಚನೆ ಪೂಜೆಗಳಲ್ಲಿ ತೊಡಗಿ ಕಾಯ ಕ್ಲೇಶಕ್ಕೂ ಜಪತಪಗಳಲ್ಲಿ ತೊಡಗಿ ಮನಃ ಕ್ಲೇಶಕ್ಕೂ ಈಡಾಗಿ, ಇದೇ ಅಂತರಂಗ-ಬಹಿರಂಗ ಶುದ್ಧಿಯೆಂದು ವ್ಯರ್ಥಶ್ರಮ ಪಡುವುದನ್ನು ಕಂಡು ಬಸವಣ್ಣನವರು

ಮಾನವನ ಗಮನವನ್ನು ಆದ್ಯಂತವಾಗಿ ಅವನ ನಿತ್ಯ ವ್ಯವಹಾರದತ್ತ ಸೆಳೆದು ಅಲ್ಲಿ ಆಯ ತಪ್ಪದಿರಲೆಂದು ಕರೆ ನೀಡಿದರು. ಕಳ್ಳತನ ಮಾಡಬಾರದು. ಕೊಲ್ಲಬಾರದು, ಸುಳ್ಳು ಹೇಳಬಾರದು, ಸಿಟ್ಟಿಗೆ ಬರಬಾರದು, ಅನ್ಯರಿಗೆ ಅಸಹ್ಯಪಡಬಾರದು, ಅಪಮಾನ ಮಾಡಬಾರದು, ಆತ್ಮಪ್ರಶಂಶೆ ಮಾಡಬಾರದು ಇವೆಲ್ಲವನ್ನು ಮಾಡದೆ ಇದ್ದರೆ ವಿಶ್ವಮಾನರಾಗುತ್ತಾರೆ. ಅವರೇ ದೇವರನ್ನು ಒಲಿಸಿಕೊಂಡವರು. ಮನದ ದೌರ್ಬಲ್ಯದಿಂದ ಮನುಷ್ಯ ಕೆಟ್ಟದ್ದನ್ನು ಮಾಡುತ್ತಾನೆ. ಕೆಟ್ಟದನ್ನು ಬಿಟ್ಟಾಗ ಒಳ್ಳೆಯವನಾಗುತ್ತಾನೆ. ಅದಕ್ಕೆ ಒಳ್ಳೆಯದನ್ನು ಮಾಡದಿದ್ದರೂ ಸರಿ ಕೆಟ್ಟದ್ದನ್ನು ಮಾಡಬಾರದೆಂದು ಹೇಳುತ್ತಾರೆ.

ಬಸವಣ್ಣನವರ ಇನ್ನೊಂದು ವಚನವನ್ನು ನೋಡಬಹುದು ನುಡಿಯ ಕುರಿತು ಹೀಗೆ ಹೇಳುತ್ತಾರೆ.

ನುಡಿದರೆ ಮುತ್ತಿನ ಹಾರದಂತಿರಬೇಕು!
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು!
ನುಡಿದರೆ ಸ್ಪಟಿಕೆಯ ಶಲಾಕೆಯಂತಿರಬೇಕು!
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು!
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯ?

ಮುತ್ತಿನ ಹಾರ ಒಂದೇ ಸಮವಾಗಿ ಒಪ್ಪ ಓರಣವಾಗಿ ಒಂದರ ನಂತರ ಒಂದು ಕೂಡಿಕೊಂಡು ಸರವು ಒಂದೇ ತೆರನಾಗಿ ಸಮವಾಗಿ ಕಾಣುವದೋ ಹಾಗೆ ನಾವಾಡುವ ಪ್ರತಿಯೊಂದು ಮಾತು ಸಮಯ, ಸಂದರ್ಭ, ನಯವಾಗಿ ಇದ್ದು ನಮ್ಮ ಮಾತನ್ನು ಕೇಳುವರಸಿಕರು ಒಪ್ಪುವಂತಿರಬೇಕು. ನಮ್ಮ ಮಾತು ಮಾಣಿಕ್ಯದಂತೆ ನಮ್ಮ ಅಂತರಂಗದ ಅನುರಾಗದ ಮೆರಗನ್ನು ಹತ್ತಾರು ಕಡೆ ಎಸಳೆಸಳಾಗಿ ಹೊರ ಹೊಮ್ಮಿಸುವಂತಿರಬೇಕು. ನಮ್ಮ ಮಾತುಗಳು ಶ್ರದ್ಧೆ, ಸ್ಪಟಿಕದ ಶಲಾಕೆಯಂತೆ ಕೊಂಕಿಲ್ಲದೆ, ನೇರವಾಗಿ ಹೃದಯಸ್ಪರ್ಶಿಯಾಗಿರಬೇಕು. ನಾವು ಮಾತನಾಡಿದರೆ ದೇವರು ಸಹ ಮೆಚ್ಚಿ ತಲೆದೂಗುವಂತಿರಬೇಕು ಎಂದು ಬಸವಾದಿ ಪ್ರಮಥರು ಬಯಸಿದ್ದರು. ಮತ್ತು ಅವರ ವಚನಗಳೆಲ್ಲ ಇದೇ ತೆರವಾಗಿಯೇ ಇದ್ದವು ಎನ್ನುವ ಕಾರಣಕ್ಕೆ ವಚನಗಳಾಗಿ ಹೊರಹೊಮ್ಮಿ ಜನ ಮಾನಸದಲ್ಲಿ ನೆಲೆನಿಂತವು ಮತ್ತು ಇವತ್ತಿಗೂ ವಚನಗಳು ಜನಪ್ರಿಯತೆಯನ್ನು ಗಳಿಸಿಕೊಂಡಿವೆ. ಅವರ ಎಲ್ಲ ವಚನಗಳಲ್ಲಿ ಬದುಕಿನ ಆದರ್ಶ ಮೌಲ್ಯಗಳನ್ನು ಕಾಣಬಹುದು. ಯಾಕೆಂದರೆ ಅವರ ಬದುಕೆ ಹಾಗಿತ್ತು. ನುಡಿದಂತೆ ನಡೆದರು, ನಡೆದಂತೆ ನುಡಿದರು, ಹಾಗಾಗಿಯೇ ಈ ಸಾಹಿತ್ಯವನ್ನು ನಡೆ ನುಡಿಸಾಹಿತ್ಯವೆಂದೆ ಹೆಸರಾಗಿದೆ. ಹೀಗಾಗಿ ಶರಣರ ಎಲ್ಲ ವಚನಗಳು ಸಾರ್ವಕಾಲಿಕ ಆದರ್ಶಗಳಾಗಿವೆ.

ಪರಾಮರ್ಶನ/ಆಕರ ಗ್ರಂಥಗಳು

- ಬಸವರಾಜು ಎಲ್. (1984). *ಬಸವ ವಚನಾಮೃತ.* (ಐದನೇ ಮುದ್ರಣ). ಬಸವ ಸಮಿತಿ.
- ಕಲಬುರ್ಗಿ. ಎಂ. ಎಂ. ಬಸವಸ್ತೋತದ ವಚನಗಳು. ಕನ್ನಡ ಅಧ್ಯಯನ ಪೀಟ, ಕರ್ನಾಟಕ ವಿಶ್ವವಿದ್ಯಾಲಯ.
- ಮೊಗಸಾಲೆ ನಾ. (2016). *ಅರಿವಿನೊಡನೆ ಅನುಸಂಧಾನ.* ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು.
- ರಂಜಾನ್ ದರ್ಗಾ. (2018). ವಚನ ಬೆಳಕು: ನೂರೊಂದು ವಚನ–ವಿಶ್ಲೇಷಣೆ. ಲಡಾಯಿ ಪ್ರಕಾಶನ.
- ವೀರಣ್ಣ ರಾಜೂರ. (2018). *ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ : ವಚನ ಸಾಹಿತ್ಯ ಭಾಗ–1.* ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ.